ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 24, ₹12

Volume -13
Issue - 07
July - 2016

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಮುಂಗಾರಿನ
ಅಭಿಷೇಕಕ್ಕೆ
ಮಿದುವಾಯಿತು
ನೆಲವು.
ಧಗೆಯಾರಿದ
ಹೃದಯದಲ್ಲಿ
ಪುಟಿದೆದ್ದಿತು
ಚೆಲುವು

–ಜಿ. ಎಸ್. ಶಿವರುದ್ರಪ್ಪ

ಹರುಷದ ಮುಂಗಾರು, ಮಳೆಯ ಲಾಭ
ಪಡೆಯುವುದು ಅವಶ್ಯಕ

–ನರೇಂದ್ರ ಮೋದಿ

▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 3670 ▸▸ ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 935

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ನಿರ್ವಹಣೆ : ಪರಿಣಾಮಕಾರಿ

ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಸ್ಥಾನ ಬೆಂಗಳೂರು ಹಾಗೂ ವಿಭಾಗೀಯ ಕಛೇರಿಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ ಹಲವು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ತಮಗೆ ತಿಳಿದಿದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ವಿಷಯಗಳ ಅಳವಡಿಕೆ, ವಿಷಯ ತಜ್ಞರ ಭಾಗವಹಿಸುವಿಕೆ, ಅಧ್ಯಯನ ಸಾಹಿತ್ಯ, ಸಮಯ ಪಾಲನೆ ಹಾಗೂ ಶಿಸ್ತು ಇವೆಲ್ಲವುಗಳ ಬಗ್ಗೆ ವಿಷಯ ತಜ್ಞರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗಿರುವುದು ಸಂತೋಷದ ವಿಷಯ.

ದಿನಾಂಕ : 04-06-2016ರಂದು ಬೆಂಗಳೂರಿನಲ್ಲಿ ನಡೆದ ವಿಷಯ ತಜ್ಞರ ಸಭೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರದ ತಜ್ಞರು, ಮಾನವ ಸಂಪನ್ಮೂಲ ವಿಷಯ ತಜ್ಞರು, ಸಹಕಾರಿ ಕ್ಷೇತ್ರದ ವಿಷಯ ತಜ್ಞರು ಹಾಗೂ ಸಹಕಾರಿ ಕಾನೂನು ವಿಷಯ ತಜ್ಞರುಗಳು, ಸಹಕಾರ ಇಲಾಖೆ ಅಧಿಕಾರಿಗಳು, ನಿವೃತ್ತ ಅಧಿಕಾರಿಗಳು ಭಾಗವಹಿಸಿ, ತರಬೇತಿ ಕಾರ್ಯಕ್ರಮಗಳು ಹೇಗಿರಬೇಕು? ವಿಷಯ ಅಳವಡಿಕೆ ಹೇಗಿರಬೇಕು? ವಿಷಯ ತಜ್ಞರಿಗೆ ವಿಷಯ ಪ್ರಸ್ತಾವಿಸಲು ಸಮಯದ ಅವಕಾಶ ಎಷ್ಟಿರಬೇಕು? ಮತ್ತು ವಿಷಯ ತಜ್ಞರು ಅಧ್ಯಯನ ಸಾಹಿತ್ಯ ಒದಗಿಸುವುದು ಮುಂತಾದ ವಿಷಯಗಳ ಬಗ್ಗೆ ವಿಷಯ ತಜ್ಞರು ಚರ್ಚಿಸಿರುವ ವಿಷಯಗಳು ಹಾಗೂ ಅವರುಗಳ ಸಲಹೆಗಳು ಅತ್ಯಂತ ಮಹತ್ವದ್ದಾಗಿವೆ. ಅವುಗಳನ್ನು ಸಂಯುಕ್ತ ಸಹಕಾರಿಯು ಸ್ವಾಗತಿಸುತ್ತದೆ.

ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುತ್ತಿರುವ ಈ ತರಬೇತಿ ಕಾರ್ಯಕ್ರಮಗಳು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ತಲುಪಬೇಕು ಎಂಬುದು ಸಂಯುಕ್ತ ಸಹಕಾರಿಯ ಗುರಿ. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಕ್ಷೇತ್ರದ ಎಲ್ಲ ವಿಷಯಗಳ ಬಗ್ಗೆ ಮಾಹಿತಿ ದೊರಕುತ್ತದೆ. ಬೇರೆ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಸಾಧ್ಯವಾಗುತ್ತದೆ. ಅಧಿಕಾರಿಗಳ ಹಾಗೂ ವಿವಿಧ ಕ್ಷೇತ್ರದ ಮುಖ್ಯಸ್ಥರುಗಳ ಪರಿಚಯವಾಗುತ್ತದೆ. ಒಟ್ಟಾರೆ ಸೌಹಾರ್ದ "ಸಹಕಾರಿ ಪರಿಸರದ" ಅಧ್ಯಯನವಾದಂತಾಗುತ್ತದೆ. ಆದ್ದರಿಂದ, ತರಬೇತಿ ಕಾರ್ಯಕ್ರಮಗಳ ಪ್ರಯೋಜನ ಪಡೆಯುವುದು ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಥಮ ಕರ್ತವ್ಯವಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ರಾಜ್ಯದಲ್ಲಿ ಪ್ರಸ್ತುತ 3650ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಿವೆ. ಸೌಹಾರ್ದ ಸಹಕಾರಿಯ ಬೆಳವಣಿಗೆಯ ವೇಗ ಪ್ರಶಂಸನೀಯವಾಗಿದೆ. ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಗುರುತಿಸಿಕೊಂಡಿದೆ. ತರಬೇತಿ ಕಾರ್ಯಕ್ರಮಗಳ ವಿಷಯದಲ್ಲಿ ವಿಷಯ ತಜ್ಞರ ಅಭಿಪ್ರಾಯ ಪಡೆದಂತೆ ಮಾರ್ಗದರ್ಶನಗಳನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ.

ಗುರುನಾಥ ಜಾಂತಿಕರ, ಅಧ್ಯಕ್ಷರು

> "ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುತ್ತಿರುವ ಈ ತರಬೇತಿ ಕಾರ್ಯಕ್ರಮಗಳು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಗೆ ತಲುಪಬೇಕು ಎಂಬುದು ಸಂಯುಕ್ತ ಸಹಕಾರಿಯ ಗುರಿ. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಕ್ಷೇತ್ರದ ಎಲ್ಲ ವಿಷಯಗಳ ಬಗ್ಗೆ ಮಾಹಿತಿ ದೊರಕುತ್ತದೆ."

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಒ ಳ ಪು ಟ ಗ ಳ ಲ್ಲಿ . . .

ಅಂತರರಾಷ್ಟ್ರೀಯ ಸಹಕಾರ ದಿನ: ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಸಂದೇಶ 4

ಹರುಷದ ಮುಂಗಾರು, ಮಳೆಯ ಲಾಭ ಪಡೆಯುವುದು ಅವಶ್ಯಕ : ನರೇಂದ್ರ ಮೋದಿ 5

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಯಶಸ್ವಿ 6

ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜೊತೆಗೆ ಚರ್ಚೆ ಹಾಗೂ ಸಂವಾದ 7

ಮೈಸೂರು ವಿಭಾಗದ ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಕಾರ್ಯಕ್ರಮ 9

ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾನೂನುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು 16

ಸಾಲ ಪತ್ರ ದಾಖಲಾತಿ (Loan Documentation) 18

ಸಹಕಾರ ಕ್ಷೇತ್ರದ ಠೇವಣಿಗಳ ಸುರಕ್ಷತೆಗಾಗಿ ಯೋಜನೆಯೊಂದರ ಅಗತ್ಯತೆ 20

ಮಂಕು ತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ 22

Reserve Bank of India News – June 2016 23

ಸಂಪಾದಕೀಯ

ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ಮಾದರಿ ತರಬೇತಿ ವ್ಯವಸ್ಥೆಗಳ ಬಗ್ಗೆ ಚಿಂತನೆ

ಕೇಂದ್ರದ ಕೃಷಿ ಹಾಗೂ ರೈತ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರಿನ ಲಲಿತ ಅಶೋಕ ಹೋಟೆಲ್‌ನಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಕೋ–ಆಪರೇಟಿವ್ ಟ್ರೈನಿಂಗ್, ನವದೆಹಲಿಯವರು ಏರ್ಪಡಿಸಿದ್ದ ವಿಚಾರಗೋಷ್ಠಿ ದೇಶದ ಸಹಕಾರ ಕ್ಷೇತ್ರದ ವಿಶೇಷವಾಗಿ ರೈತರಿಗೆ ಸಹಕಾರ ಸಂಸ್ಥೆಗಳ ಮೂಲಕ ಒದಗಿಸಬಹುದಾದ ಮಾಹಿತಿಗಳ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ತರಬೇತಿ ಸಂಸ್ಥೆಗಳ ಪಾತ್ರವನ್ನು ಕುರಿತು ಚರ್ಚಿಸಿರುವುದು ಸ್ವಾಗತಾರ್ಹ. ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಸಹಕಾರ ತರಬೇತಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಆದರೆ, ತರಬೇತಿ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳು ನೀಡುತ್ತಿರುವ ತರಬೇತಿ ಹಾಗೂ ಇತರೆ ಮಾಹಿತಿಗಳು ಸಮಾಜದ ಹಾಗೂ ಸಹಕಾರ ಕ್ಷೇತ್ರದ ಕಡೆಯ ವ್ಯಕ್ತಿಗೆ ತಲುಪುವಲ್ಲಿ ಹೆಚ್ಚಿನ ಪ್ರಯತ್ನಗಳು ನಡೆಯಬೇಕು ಎಂಬುವುದರ ಬಗ್ಗೆ ಒತ್ತು ಕೊಟ್ಟಿರುವುದು ಸಂತೋಷದ ವಿಷಯ.

ಸಹಕಾರ ತರಬೇತಿ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತದಿಂದ ರಾಷ್ಟ್ರಮಟ್ಟದವರೆಗೂ ಹಲವಾರು ವ್ಯವಸ್ಥೆಗಳಿವೆ. ಈ ವ್ಯವಸ್ಥೆಗಳು ತಮ್ಮದೇ ಆದ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಹಲವಾರು ತರಬೇತಿಗಳಲ್ಲಿ ವಿಷಯಗಳ ಪುನರಾವರ್ತನೆ ಆಗುತ್ತಿರುತ್ತದೆ. ಅನೇಕ ವಿಷಯಗಳನ್ನು ಎಲ್ಲಿಯೂ ಅಳವಡಿಸಿರುವುದಿಲ್ಲ. ಕೇಂದ್ರದ ಹಾಗೂ ರಾಜ್ಯಗಳ ಯೋಜನೆಗಳು ಹಲವಾರು ಘೋಷಣೆಗಳಾಗಿ ಕಾರ್ಯರೂಪಕ್ಕೆ ಬರುವ ಹೊತ್ತಿಗೆ ಅವಧಿ ಮುಕ್ತಾಯಕ್ಕೆ ಬಂದಿರುತ್ತದೆ. ಹೀಗಾಗಿ ಯೋಜನೆಗಳಿಗೆ ಸರಕಾರಗಳು ಮೀಸಲಿಡುವ ಹಣ ವಿನಿಯೋಗವಾಗದೇ ಉಳಿದುಬಿಡುವುದು ವಿಪರ್ಯಾಸ. ಫಲಾನುಭವಿಗಳು ವಂಚಿತರಾಗುವುದು ದುರಾದೃಷ್ಟ. ಈ ಬಗ್ಗೆ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಸಂಸ್ಥೆಗಳು ಒಟ್ಟಾಗಿ ಸೇರಿ ಗಂಭೀರ ಚಿಂತನೆ ನಡೆಸಬೇಕಿದೆ ಎಂಬ ನಿರ್ಣಯಕ್ಕೆ ಬಂದಿರುವುದು ಸ್ವಾಗತಾರ್ಹ.

ಸಹಕಾರ ಕ್ಷೇತ್ರದ ಪ್ರಗತಿಗೆ ಅಗತ್ಯವಾದ ಹಣಕಾಸಿನ ನೆರವು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವಲ್ಲಿ ಸರಕಾರ ಗಮನ ಹರಿಸಬೇಕು. ತರಬೇತಿ ಹಾಗೂ ಸಹಕಾರಿ ಡಿಪ್ಲೋಮಾ ಮತ್ತು ಪದವೀಧರರಿಗೆ ನೇಮಕಾತಿ, ಬಡ್ತಿ ಮತ್ತು ಇತರೆ ಮೋಟಿವೇಷನ್ ವಿಷಯಗಳ ಬಗ್ಗೆ ಸರಕಾರ ಗಮನ ಹರಿಸುವುದು ಅಗತ್ಯ ಎಂಬ ಬಗ್ಗೆ ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಚಂದ್ರಪಾಲ್ ಸಿಂಗ್ ಯಾದವ್‌ರವರು ಒತ್ತು ಕೊಟ್ಟಿರುವುದು ಒಳ್ಳೆಯ ಬೆಳವಣಿಗೆ.

ಈ ವಿಚಾರಗೋಷ್ಠಿಯಲ್ಲಿ ತರಬೇತಿ ಮಾಡ್ಯೂಲ್‌ಗಳಿಗೆ ಹೆಚ್ಚು ಒತ್ತು ಕೊಟ್ಟಿರುವುದು ವಿಶೇಷ. ತರಬೇತಿ ಮಾಡ್ಯೂಲ್‌ಗಳು ಪರಿಣಾಮಕಾರಿ ತರಬೇತಿಗೆ ಅವಶ್ಯಕ. ಈ ಬಗ್ಗೆ ತರಬೇತಿಯ ಹೊಣೆ ಇರುವ ಎಲ್ಲಾ ಸಂಸ್ಥೆಗಳು ಒಟ್ಟಾಗಿ ಚರ್ಚಿಸಿ, ಕ್ರಿಯಾಯೋಜನೆ ಸಿದ್ಧಪಡಿಸುವುದು ಅಗತ್ಯವೆಂದು ನಿರ್ಣಯಕ್ಕೆ ಬಂದಿರುವುದು, ಒಟ್ಟಿನಲ್ಲಿ ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ಕ್ಷೇತ್ರದ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸಹಕಾರಿಗಳ ನಡೆಗೆ ನ್ಯಾಷನಲ್ ಕೌನ್ಸಿಲ್ ಫಾರ್ ಕೋ–ಆಪರೇಟಿವ್ ಟ್ರೈನಿಂಗ್, ನವದೆಹಲಿಯವರ ಪ್ರಯತ್ನ ಸ್ವಾಗತಾರ್ಹ ಹೆಜ್ಜೆ. ■

ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ
ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

ಪರಮ ಪ್ರೇಮ

'ಪರಮ ಪ್ರೇಮ' ಇದು ಭಕ್ತಿಯ ವಾಕ್ಯ. ಪ್ರೇಮ ಇದೊಂದು ಪವಿತ್ರವಾದ ವಸ್ತು. ಅದರ ಬೆಲೆ ಅಷ್ಟು ಇಷ್ಟು ಅನ್ನುವಂತಿಲ್ಲ. ಹೊರ ಜಗತ್ತಿನ ಎಲ್ಲ ವಸ್ತುಗಳಿಗೆ ಬೆಲೆ ಇದೆ. ಪ್ರೇಮಕ್ಕೆ ಬೆಲೆ ಇಲ್ಲ.

ಒಳಗಿನ ಸಂಪತ್ತು ಅರ್ಥ ಮಾಡಿಕೊಂಡರೆ ಹೊರಗಿನ ಸಂಪತ್ತು ಶ್ರೀಮಂತಗೊಳ್ಳುತ್ತದೆ. ಹೊರಗಿನ ಸಂಪತ್ತು ಇರಬೇಕು. ಅದರಲ್ಲಿಯೇ ಸುಖ ಕಾಣಬೇಕು. ಜೊತೆಗೆ ಒಂದಿಷ್ಟು ಭಕ್ತಿಯೂ ಮನಸ್ಸಿನೊಳಗೆ ಸೇರಿದರೆ ತೃಪ್ತ ಅನಿಸುತ್ತದೆ. ದೇವರನ್ನು ಪ್ರೀತಿಸುವುದಕ್ಕೆ ಭಕ್ತಿ ಎನ್ನುತ್ತೇವೆ. ಈ ಭಾವ ಅರಳಬೇಕು. ದೇವರು ಬಯಲು, ಅನಂತ, ಆಧ್ಯಾತ್ಮಿಕ, ಬಟ್ಟ ಬಯಲು. ಅದು ಎಲ್ಲೆಡೆ ಯಾವಾಗಲೂ ಇರುತ್ತದೆ. ಇಂಥ ದೇವನ ಸ್ಪಷ್ಟ ಕಲ್ಪನೆ ಇಟ್ಟುಕೊಂಡು ಸಂತೋಷ ಪಡುತ್ತೇವಲ್ಲ ಅದು ಪರಮಪ್ರೇಮ. ಶುದ್ಧ ಪ್ರೇಮ, ನಿಶಬ್ಧ ಪ್ರೇಮ, ಅಮೃತ ಪ್ರೇಮ. ಶಬ್ಧ ಎಷ್ಟು ಚೆಂದ. ಭಾಷೆ ಎಲ್ಲವನ್ನು ಹೊತ್ತು ಒಯ್ಯುತ್ತದೆ. ಭಕ್ತಿಯ ಭಾಷೆ ಸಮಸ್ಯೆಗಳನ್ನು ಪರಿಹಾರ ಮಾಡುತ್ತದೆ.

ಹೊರಗಿನ ಸಂಪತ್ತೂ ಇರಬೇಕು, ಒಂದಿಷ್ಟು ಒಳಗಿನ ಸಂಪತ್ತು ಇರಬೇಕು. ಅದು ಪರಮಪ್ರೇಮ. ಅದಕ್ಕೆ ದೇವರು ಎನ್ನುತ್ತೇವೆ. ನಿರ್ಲಿಪ್ತ, ನಿರ್ಲೇಪ, ನಿರ್ಮೋಹ, ಅದನ್ನು ಹೊಲಸು ಮಾಡುವುದಕ್ಕೆ ಬರುವುದಿಲ್ಲ. ಬಟ್ಟೆ ಹೊಲಸು ಆಗುತ್ತದೆ, ಹೂವು ಬಾಡಿ ಹೊಲಸು ಆಗುತ್ತದೆ, ಜಗತ್ತಿನ ಎಲ್ಲ ವಸ್ತುಗಳೂ ಇನ್ನೊಂದು ವಸ್ತುವಿನ ಸಂಪರ್ಕಕ್ಕೆ ಬಂದು ಹೊಲಸು ಆಗುತ್ತವೆ, ಮಲಿನ ಆಗುತ್ತವೆ. ವಸ್ತುಗಳು ಸಲಿಪ್ತಃ.

ಎರಡು ವಸ್ತುಗಳನ್ನು ತೂಗಿ ತೂಗಿ ಯಾವುದು ಮುಖ್ಯ ಅಂಥ ತಿಳಿಯದಿದ್ದರೆ ಹೀಗಾಗುತ್ತದೆ. ನಾವು ಯಾವುದನ್ನಾದರೂ ನೋಡಿದೆವೋ ಹಿಡಿದು ಬಿಡುತ್ತೇವೆ. ಬುದ್ಧ ಹೇಳಿದ ಇದು ದುಃಖಕ್ಕೆ ಕಾರಣ ಅಂದ, ಶಂಕರ ಹೇಳಿದ ಸತ್ಯ ಅದಲ್ಲ ಅಂದ, ಬಸವಣ್ಣ ಹೇಳಿದ ಎಲ್ಲಾ ಕೂಡಲಸಂಗದಲ್ಲಿದೆ ಅಂದ. ಆದರೆ ಮನಸ್ಸು ಬಿಡವಲ್ದು. ಜಗತ್ತಿನಲ್ಲಿ ಎಲ್ಲಾ ದೂರ ಸರಿಸುತ್ತೇವೆ.

ಭಕ್ತ ಹೇಗೆ ಹಿಡಿದಿರುತ್ತಾನೆ ಅಂದರೆ ಬಿಡುವಂತೆ ಹಿಡಿದಿರುತ್ತಾನೆ. ಬಿಟ್ಟು ಬರುವಂತೆ ಹಿಡಿದಿರುತ್ತಾನೆ. ಬಳಸುತ್ತಾನೆ. ಮುಳುಗೋದಿಲ್ಲ. ಎಲ್ಲಾ ಇರಬೇಕು. ಯಾವುದಕ್ಕೂ ಅಂಟಿಕೊಂಡಿರಬಾರದು. ಮೋಹ ಕಟ್ಟಬಾರದು. ಹಾಗೇ ಪ್ರಪಂಚ. ಸತಿ–ಪತಿ ಅಂತಿರಬೇಕು, ಯಾವಾಗಲೂ ಸತಿ–ಪತಿ ಅಲ್ಲ. ಊಟ, ಓದು, ನಿದ್ರೆಯಲ್ಲಿ ಸತಿ–ಪತಿಗಳಾಗೋದು ಎಲ್ಲಿ ಸಾಧ್ಯ? ಜೀವನ ಎಂದರೆ ಸರಳ ಸುಂದರ, ಕೂಡಿ ಹೋಗುತ್ತಿರಬೇಕು. ಅಂಟಿಕೊಂಡಿರಬಾರದು. ಎಲ್ಲರನ್ನೂ ಪ್ರೀತಿಸಬೇಕು, ಆ ಪ್ರೀತಿ ಬಂಧನ ಆಗಬಾರದು. ಬಹಳ ಮುಳುಗಬಾರದು. ತುಕಾರಾಂ ಮರಣದ ಸ್ಥಿತಿಯಲ್ಲಿ ಹೆಂಡತಿಯನ್ನು ಕರೆದು ಹೇಳುತ್ತಾನೆ... ನಾವು ನಮ್ಮ ಊರಿಗೆ ಹೋಗುತ್ತೇವೆ, ನೀವು, ಬೇಕಾದರೆ ಬರಬಹುದು. ಬರಲೇಬೇಕು ಅನ್ನಲ್ಲಿಲ್ಲ.

ಅಂತರರಾಷ್ಟ್ರೀಯ ಸಹಕಾರ ದಿನ:
ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಸಂದೇಶ

ವಿಶ್ವ ಸಂಸ್ಥೆಯು (UNO) ತನ್ನ ನಿರ್ಣಯ 47/90 ದಿನಾಂಕ : 16–12–2016ರ ಪ್ರಕಾರ ಪ್ರತಿ ವರ್ಷ ಜುಲೈ ಮೊದಲನೆಯ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವನ್ನಾಗಿ ಆಚರಿಸಲಾಗುವುದು ಎಂಬ ನಿರ್ಣಯದ ಪ್ರಕಾರ 1995 ರಿಂದ ಪ್ರತಿ ವರ್ಷ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸಲಾಗುತ್ತಿದೆ. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (ICA) ಈ ದಿನವನ್ನು 1927ರಿಂದಲೇ ಆಚರಿಸುತ್ತಾ ಬಂದಿದ್ದು, ಸಹಕಾರ ಕ್ಷೇತ್ರದ ಬಗ್ಗೆ ವಿಶ್ವ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸುತ್ತಾ ಬಂದಿದೆ.

2016 ವರ್ಷದ ಅಂತರರಾಷ್ಟ್ರೀಯ ಸಹಕಾರ ದಿನದ ಆಚರಣೆಯ ಧ್ಯೇಯ "ಸಹಕಾರ ಸಂಸ್ಥೆಗಳು ಭವಿಷ್ಯದ ಅಭಿವೃದ್ಧಿಯ ಶಕ್ತಿ ಕೇಂದ್ರಗಳು" ಎಂದು ಘೋಷಿಸಿದೆ.

ಈ ವರ್ಷದಲ್ಲಿ ಸಹಕಾರಿ ಸಂಸ್ಥೆಗಳು 1. ಕಡುಬಡತನ ನಿವಾರಣೆ 2. ಅಸಮಾನತೆ ನಿವಾರಣೆ 3. ವಾತಾವರಣ ನಿರ್ವಹಣೆಯಂತಹ ಮಹತ್ವದ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಮಾಜಿಕ ಸಂಸ್ಥೆಗಳೊಡನೆ ಕೈಜೋಡಿಸಿ, ನಿರ್ವಹಿಸಲು ಕರೆ ನೀಡಿದೆ.

- ಸಹಕಾರ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತನ್ನ ಅಂತರಜಾಲವನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಹಕಾರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದೆ.
- ಸಹಕಾರ ಸಂಸ್ಥೆಗಳನ್ನು ಬಲಪಡಿಸುವ ದೃಷ್ಟಿಯಿಂದ ಮಾಧ್ಯಮದವರೊಡನೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡು ಅವರೊಡನೆ ಹಾಗೂ ಸರಕಾರಗಳೊಡನೆ ಈ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಪ್ರಚಾರ ನೀಡುವಂತೆ ಹಾಗೂ ಪ್ರತಿಕ್ರಿಯಿಸುವಂತೆ ಮಾಡುವುದು.
- ಸಹಕಾರ ಸಾಧನೆಗಳನ್ನು ಬಿಂಬಿಸುವ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಗಳನ್ನು ಏರ್ಪಡಿಸುವುದು, ಪ್ರಚಾರ ಕ್ಯಾಂಪೇನ್‌ಗಳನ್ನು ಏರ್ಪಡಿಸುವುದು, ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆಯುವುದು.
- ಸಹಕಾರ ಸಂಸ್ಥೆಗಳು ಸಮಾಜದ ವ್ಯವಸ್ಥೆಗಳಾದ ಕಂಪನಿಗಳು, ಸೇವಾ ಸಂಸ್ಥೆಗಳು, ಸಾಮಾಜಿಕ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳೊಂದಿಗೆ ಸೇರಿ ಸಹಕಾರಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.
- ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಿರ್ವಹಿಸುವುದು.

ಹರುಷದ ಮುಂಗಾರು, ಮಳೆಯ ಲಾಭ ಪಡೆಯುವುದು ಅವಶ್ಯಕ : ಮೋದಿ

ನರೇಂದ್ರ ಮೋದಿ ಅವರು ಇತೀಚೆಗೆ ಖಾಸಗಿ ಸುದ್ದಿ ನೀಡಿದ ಸಂದರ್ಶನದಲ್ಲಿ ಬಡತನ, ಉದ್ಯೋಗ, ಉದ್ದಿಮೆ, ಆರ್ಥಿಕ ಪ್ರಗತಿ, ವಿದೇಶಾಂಗ ನೀತಿ ಆರ್ಥಿಕ ಪ್ರಗತಿಯಿಂದ ಮೊದಲಾಗಿ ಅನೇಕ ಅಂಶಗಳ ಬಗ್ಗೆ ತಮ್ಮ ವಿಚಾರಧಾರೆ ಹಂಚಿಕೊಂಡಿದ್ದಾರೆ. ಅದರಲ್ಲಿನ ಮುಂಗಾರು, ಕೃಷಿ ಕುರಿತ ಅವರ ಮಾತುಗಳು ಇಲ್ಲಿವೆ

ಮುಂಗಾರಿನ ಲಾಭವನ್ನು ನಾವು ಬಳಸಿಕೊಳ್ಳುವ ಮೂಲಕ ನಮ್ಮಲಿನ ನೀರಿನ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಲೇಬೇಕು. ನೀರಿನ ಶೇಖರಣೆ ಮತ್ತು ನೀರಾವರಿ, ನೀರನ್ನು ಗದ್ದೆಗಳಿಗೆ ಹರಿಸುವಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಕಿರು ನೀರಾವರಿಗೆ ಹೆಚ್ಚಿನ ಒತ್ತು ನೀಡಬೇಕು. ರೈತರು ಈಗ ಬತ್ತದ ಬೆಳೆಗೂ ಹನಿ ನೀರಾವರಿ ಶುರು ಮಾಡಿದ್ದಾರೆ. ನೀರಿನ ಸೌಲಭ್ಯ ಚೆನ್ನಾಗಿದ್ದರೆ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದಿದ್ದಾರೆ.

ನಂತರ ಕೃಷಿಗೆ ಕೇಂದ್ರ ಸರಕಾರ ಹಲವು ಕ್ರಮಗಳನ್ನು ಆರಂಭಿಸಿದೆ. ರಾಜ್ಯ ಸರಕಾರಗಳು ಅವುಗಳ ಜಾರಿಗೆ ಉತ್ಸಾಹ ತೋರುವ ನಂಬಿಕೆ ನನ್ನದು. ನಾನು ನಾನಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಅವರು ನೀರಿನ ವಿಷಯಕ್ಕೆ ಸಂಬಂಧಿಸಿ ಸಾಕಷ್ಟು ಕೆಲಸ ಮಾಡಿದ್ದಾರೆ. ಕೇಂದ್ರ ಸರಕಾರದ ಪ್ರಧಾನ ಮಂತ್ರಿ ಫಸಲ್‌ಬಿಮಾ ಯೋಜನೆಯನ್ನು ಬಳಸಿಕೊಂಡರೂ ರೈತರಿಗೆ ಸಾಕಷ್ಟು ಲಾಭಗಳಿವೆ ಎಂದು ನುಡಿದ್ದಾರೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯ ಕಾರ್ಯಾರಂಭ :

ಪ್ರಭಾರ ನ್ಯಾಯಾಧೀಶರಾಗಿ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್. ನರಸಿಂಹಮೂರ್ತಿಯವರ ನೇಮಕ

"ದಾವಾ ಪಂಚಾಯತ್ ನ್ಯಾಯಾಲಯಕ್ಕೆ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್.ನರಸಿಂಹಮೂರ್ತಿಯವರು ಆಗಮಿಸಿದಾಗ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಸ್ವಾಗತಿಸುತ್ತಿರುವುದು."

ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗಾಗಿ ಸಂಯುಕ್ತ ಸಹಕಾರಿಗೆ ಪ್ರತ್ಯೇಕವಾಗಿ ಮಂಜೂರಾಗಿರುವ ದಾವಾ ಪಂಚಾಯತ್ ನ್ಯಾಯಾಲಯವು ಕಾರ್ಯಾರಂಭ ಮಾಡಿದೆ. ದಾವಾ ಪಂಚಾಯತ್ ನ್ಯಾಯಾಲಯದ ಜಂಟಿ ನಿಬಂಧಕರು UR441 ನಿಬಂಧಕರ ಕಛೇರಿಯ ಐಸಿಡಿಪಿ ವಿಭಾಗದ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್.ನರಸಿಂಹ ಮೂರ್ತಿಯವರನ್ನು ಪ್ರಭಾರ ನ್ಯಾಯಾಧೀಶ ರನ್ನಾಗಿ ನೇಮಕ ಮಾಡಿ ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪರವರು ಆದೇಶ ಹೊರಡಿಸಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಕರಣಗಳನ್ನು ಇನ್ನು ಮುಂದೆ ಈ ನ್ಯಾಯಾಲಯದಲ್ಲಿಯೇ ನಡೆಸಲಾಗುತ್ತದೆ.

ನ್ಯಾಯಾಲಯದ ಕೆಲಸದ ಅವಧಿ :

- ಪ್ರತಿ ದಿನ ಬೆಳಿಗ್ಗೆ 11.30 ರಿಂದ 1.30
- ಮಧ್ಯಾಹ್ನ 3.00 ರಿಂದ ಸಂಜೆ 5.30
- ಕಛೇರಿಯ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 5.30

ಅಭಿನಂದನೆಗಳು

ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ 2ನೇ ಬಾರಿಗೆ ಆಯ್ಕೆಯಾಗಿರುವ ಶ್ರೀ ಅರುಣ ಶಹಾಪುರರವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ, ಸಿಬ್ಬಂದಿ ವರ್ಗ ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು. ಶ್ರೀಯುತರು ಸಂಯುಕ್ತ ಸಹಕಾರಿಯ ವಿಜಯಪುರ ಜಿಲ್ಲೆಯ ನಿರ್ದೇಶಕರಾಗಿದ್ದಾರೆ.

ಸ್ವಾಯತ್ತ ಸಹಕಾರಿ ಕಾಯ್ದೆಗಳ ರಾಷ್ಟ್ರೀಯ ಸಮಾವೇಶ

ದೇಶದಲ್ಲಿ ಯೋಜನಾ ಆಯೋಗದ ಸೂಚನೆಯ ಮೇರೆಗೆ ಮಾದರಿ ಸಹಕಾರಿ ಕಾಯ್ದೆಯನ್ನು ಜಾರಿಗೆ ತಂದಿರುವ ರಾಜ್ಯಗಳ ಪ್ರಪ್ರಥಮ ರಾಷ್ಟ್ರೀಯ ಸಮಾವೇಶವನ್ನು ಅಕ್ಟೋಬರ್ 2016ರ ರಾಷ್ಟ್ರೀಯ ಸಹಕಾರಿ ಯೂನಿಯನ್ (NCUI) ಹಾಗೂ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (ICA) ಇವರುಗಳ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಆಯೋಜಿಸಲು ಉದ್ದೇಶಿಸ ಲಾಗಿದೆ. ಈ ಬಗ್ಗೆ ಪೂರ್ವಭಾವಿ ಸಿದ್ದತೆಗಳು ಜಾರಿಯಲ್ಲಿವೆ.

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಯಶಸ್ವಿ

ತರಬೇತಿಯಲ್ಲಿ ಭಾಗವಹಿಸುವುದು ಅಭಿವೃದ್ಧಿಯ ಮುನ್ನುಡಿ - ಉದ್ಘಾಟನಾ ಸಮಾರಂಭದಲ್ಲಿ ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪ

ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ನಗರದ ರಾಷ್ಟ್ರೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 15ನೇ ತಂಡದ ಕಾರ್ಯಕ್ರಮವನ್ನು ದಿನಾಂಕ 10–06–2016ರಂದು ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪನವರು ಉದ್ಘಾಟಿಸಿದರು. ಶ್ರಿಯುತರು ಮಾತನಾಡಿ ಯಾವುದೇ ಸಂಸ್ಥೆಯು ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ಸಿಬ್ಬಂದಿಯವರಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಜ್ಞಾನವನ್ನು ನೀಡುವಂತಹ ತರಬೇತಿ ಪಡೆದಿರುವುದು ಮುಖ್ಯವಾಗುತ್ತದೆ.

ತರಬೇತಿ ಪಡೆದಿರದ ಸಿಬ್ಬಂದಿಯಿಂದ ಉತ್ತಮ ಕೆಲಸ ನಿರ್ವಹಣೆ ಸಾಧ್ಯವಾಗುವುದಿಲ್ಲ. ಹೀಗಾಗಿ ಪ್ರತಿಯೊಬ್ಬ ಸಿಬ್ಬಂದಿಯವರಿಗೂ ತರಬೇತಿ ವ್ಯವಸ್ಥೆ ಮಾಡುತ್ತಿರುವುದು ಒಳ್ಳೆಯ ಕೆಲಸ. ತರಬೇತಿಯಲ್ಲಿ ಭಾಗವಹಿಸುವುದರಿಂದ ಸಂಸ್ಥೆಯನ್ನು ಅಭಿವೃದ್ಧಿಯ ಕಡೆಗೆ ಮುನ್ನಡೆಸುವುದು ಸಾಧ್ಯವಾಗುತ್ತದೆ. ತರಬೇತಿ ಪ್ರತಿಯೊಬ್ಬರಿಗೆ ಅವಶ್ಯಕವಾಗಿ ಬೇಕು. ಇದೊಂದು ಮುನ್ನುಡಿ ಇದ್ದಂತೆ, ಈ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿ ಅಭಿನಂದನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ, ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಹೆಚ್ಚಿನ ಮಹತ್ವದ್ದಾಗಿದೆ. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಲಹೆಯ ಮೇರೆಗೆ ಈ ರೀತಿಯ ವಿಶೇಷ ತರಬೇತಿಯನ್ನು ಕಳೆದ 7 ವರ್ಷಗಳಿಂದ ಹಮ್ಮಿಕೊಳ್ಳುತ್ತಾ ಬರಲಾಗಿದೆ. ಇದು 15ನೇ ತಂಡ. ಇದುವರೆಗೆ ತರಬೇತಿ ಪಡೆದವರೆಲ್ಲ ಸೌಹಾರ್ದ ಸಹಕಾರಿಗಳಲ್ಲಿ ಉತ್ತಮವಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸೌಹಾರ್ದ ಸಹಕಾರಿಗಳು ತಿಳಿಸಿದ್ದಾರೆ ಎಂದರು.

ಉದ್ಘಾಟನಾ ಸಮಾರಂಭ

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಶ್ರೀಮತಿ ಹೆಚ್.ಸಿ.ನಾಗರತ್ನ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಉಪಸ್ಥಿತರಿದ್ದು, ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೆರವೇರಿಸಿದರು. ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ. ಕುಮಾರ್‌ರವರು ಸ್ವಾಗತವನ್ನು ಹಾಗೂ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ. ರವರು ವಂದನಾರ್ಪಣೆಯನ್ನು ಮಾಡಿದರು.

ತರಬೇತಿ ಕಾರ್ಯಕ್ರಮವನ್ನು ಪ್ರತಿದಿನ ಯೋಗದೊಂದಿಗೆ ಪ್ರಾರಂಭಿಸಿ, ವಿವಿಧ ವಿಷಯಗಳ ಬಗ್ಗೆ ತರಗತಿಗಳನ್ನು ನಡೆಸುವುದರ ಜೊತೆಗೆ ಸಾಯಂಕಾಲ ಅನೌಪಚಾರಿಕವಾಗಿ ವಿವಿಧ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ನಡೆಸಲಾಗಿದೆ.

ಯೋಗ ನಿರತ ಶಿಬಿರಾರ್ಥಿಗಳು

ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರ ಜೊತೆಗೆ ಚರ್ಚೆ ಹಾಗೂ ಸಂವಾದ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಅಧ್ಯಕ್ಷರು ಹಾಗೂ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಸತೀಶಚಂದ್ರರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯದ ಕೆಲವು ಆಯ್ದ ಸೌಹಾರ್ದ ಸಹಕಾರಿಗಳಾದ ಬೆಂಗಳೂರಿನ ಉದಯ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡೂರಾವ್ ಹಾಗೂ ಮುಖ್ಯಕಾರ್ಯ ನಿರ್ವಾಹಕರಾದ ಶ್ರೀ ಶ್ರೀಕಾಂತ, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್ ಹಾಗೂ ಕಾರ್ಯದರ್ಶಿ ಶ್ರೀ ರಾಜಶೇಖರ ಕುರ್ತಕೋಟಿ, ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ಮಸ್ಕಿ, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ರಾಮಕೃಷ್ಣ ನಾಯಕ ಹಾಗೂ ಬೆಂಗಳೂರು ಶಾಖೆಯ ವ್ಯವಸ್ಥಾಪಕರಾದ ಶ್ರೀ ಹೇಮಂತ, ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಾಗಮಣಿ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ

ಎ.ವಿ.ಎಲ್.ರಾವ್, ಸಮುದಾಯ ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಆಶಾ ರಾಮನ್ ಹಾಗೂ ನಿರ್ದೇಶಕರಾದ ಶ್ರೀ ಎನ್.ಪಿ. ವಾದಿರಾಜ, ಹಿರೇಕೆರೂರ ತಾಲ್ಲೂಕು ವಿದ್ಯಾವರ್ಧಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ತಿಪ್ಪಣ್ಣನವರ ಹಾಗೂ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯ ನಿರ್ವಾಹಕರಾದ ಶ್ರೀ ಬಾಬುರೆಡ್ಡಿಯವರು ಭಾಗವಹಿಸಿದ್ದರು. ಸಹಕಾರ ವಾರ ಪತ್ರಿಕೆಯ ಸಂಚಾಲಕರಾದ ಶ್ರೀ ಪಿ.ರುದ್ರಪ್ಪನವರು ಸಂವಾದಕಾರರಾಗಿ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ತಮ್ಮ ಸಹಕಾರಿಯ ವಿಶೇಷತೆಗಳನ್ನು ತಿಳಿಸಿದರು. ನಂತರ ಶಿಬಿರಾರ್ಥಿಗಳು ಪ್ರತಿಯೊಂದು ಸಹಕಾರಿಯ ಪ್ರಗತಿಯ ವಿವರ ಹಾಗೂ ವಿಶೇಷತೆಗಳ ಬಗ್ಗೆ ಸಂವಾದ ನಡೆಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್.ಆರ್. ಸತೀಶಚಂದ್ರರವರು ಮಾತನಾಡಿ, ಇದೊಂದು ವಿಭಿನ್ನವಾದ ತರಬೇತಿ ಕಾರ್ಯಕ್ರಮವನ್ನು ಸಂವಾದ ರೂಪದಲ್ಲಿ ಸಂಯುಕ್ತ ಸಹಕಾರಿಯ ಈ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯದಲ್ಲಿ ಅಳವಡಿಸಿರುವುದು ಉತ್ತಮವಾದ ಕೆಲಸ. ಹೆಚ್ಚಿನ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಈ ವೇದಿಕೆಯಿಂದ ಸಾಧ್ಯವಾಗಿದೆ. ಅನೇಕ ಪ್ರಗತಿಪರ ಚಿಂತನೆಗಳೂ ಈ ವೇದಿಕೆಯಿಂದ ಹೊರಹೊಮ್ಮಿವೆ. ವೃತ್ತಿಯಲ್ಲಿ ಪರಿಣತಿ ಹೆಚ್ಚಿಸಲು ಸಾಧ್ಯವಾಗಿದೆ. ವ್ಯಕ್ತಿತ್ವ ವಿಕಸನಕ್ಕೆ ಇದೊಂದು ಉತ್ತಮ ಅವಕಾಶ ಎಂದು ತಿಳಿಸಿದರು.

ಅಧ್ಯಯನ ಪ್ರವಾಸ : ಬೆಂಗಳೂರು ಉತ್ತರ ತಾಲ್ಲೂಕಿನ ರೈತರ ಸೇವಾ ಸಹಕಾರ ಸಂಘ ಸಿಂಗನಾಯಕನಹಳ್ಳಿ, ತರಹುಣಸೇ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಾಯಿತು

ಅಧ್ಯಯನ ಪ್ರವಾಸದಲ್ಲಿ ಶಿಬಿರಾರ್ಥಿಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು : ತರಬೇತಿ ಅವಧಿಯಲ್ಲಿ ಕುಮಾರಿ ಪೂರ್ಣಿಮಾ ಹಾಗೂ ಕುಮಾರಿ ಪ್ರಿಯಾಂಕರವರಿಂದ ಭರತ ನಾಟ್ಯ, ಶ್ರೀಮತಿ ರಮಾ ಅರವಿಂದ ತಂಡದಿಂದ ಸುಗಮ ಸಂಗೀತ, ಶ್ರೀ ವೈ.ವಿ.ಗುಂಡೂರಾವ್ ಹಾಗೂ ಶ್ರೀ ಬಸಪ್ಪ ಇವರುಗಳಿಂದ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ವಿಚಾರಗಳು ಹಾಗೂ ಡಾ. ಹರೀಶ್‌ರವರಿಂದ ಸಕಾರಾತ್ಮಕ ಶಕ್ತಿ ಬೆಳವಣಿಗೆಗೆ ಪೂರಕ ವಿಷಯಗಳ ಬಗ್ಗೆ ಚಿಂತನೆಗಳು ನಡೆದವು.

ಕಾರ್ಯಕ್ರಮದ ಕೊನೆಯಲ್ಲಿ ತರಬೇತಿಯ ಮೌಲ್ಯಮಾಪನವನ್ನು ನಡೆಸಲಾಯಿತು. 90 ನಿಮಿಷಗಳಲ್ಲಿ 100 ಅಂಕಗಳ ಪ್ರಶ್ನೆಗಳನ್ನು ನೀಡಲಾಯಿತು. ಇದರಲ್ಲಿ ಶ್ರೀ ವಿನಾಯಕ ಹೆಗಡೆ ಪ್ರಥಮ, ಶ್ರೀ ಬಾಬೂರಾವ ದ್ವಿತೀಯ ಹಾಗೂ ಶ್ರೀ ಕನಕರಾಯ ಪಾಟೀಲ್ ತೃತೀಯ ಸ್ಥಾನ ಪಡೆದರು.

ಸಮಾರೋಪ ಕಾರ್ಯಕ್ರಮ

ದಿನಾಂಕ : 19–06–2016ರಂದು ವ್ಯಕ್ತಿತ್ವ ವಿಕಸ ತರಬೇತಿಯ ಮುಕ್ತಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ವಹಿಸಿದ್ದರು.

ಹಿರಿಯ ಸಹಕಾರಿ ಎನ್.ಐ.ಆರ್.ಬಿ. ಟ್ರಸ್ಟಿ ಕಾರ್ಯದರ್ಶಿ ಶ್ರೀ ಪಿ.ವಿ.ಪ್ರಭು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಶ್ರೀ ವಸಂತ ನಾಯಕ ಭಾಗವಹಿಸಿ, ಮಾತನಾಡಿದರು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಹಾಗೂ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದವರಿಗೆ ಬಹುಮಾನಗಳನ್ನು ವಿತರಿಸಿದರು. ಶ್ರೀ ಪಿ.ವಿ. ಪ್ರಭುರವರು ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಯುವಜನರ ಪಾಲುಗಾರಿಕೆ ಅವಶ್ಯಕವಾಗಿದೆ. ಯುವಕರು ಈ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಹೆಚ್ಚು ಕಾಳಜಿ ವಹಿಸುವಂತಾಗಲು ಈ ತರಬೇತಿ ಪಡೆಯುವುದು ಮಹತ್ವದ್ದು ಎಂದು ತಿಳಿಸಿ, ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆಯನ್ನು ಪ್ರತಿಪಾದಿಸಿದರು. ಈ ಶಿಬಿರದಲ್ಲಿ ಸಂಯುಕ್ತ ಸಹಕಾರಿಯ ಹತ್ತು ಸಿಬ್ಬಂದಿಗಳು ಸೇರಿದಂತೆ ರಾಜ್ಯದ 22 ಜಿಲ್ಲೆಯ 35 ಸೌಹಾರ್ದ ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು

ಉತ್ತಮ ಶಿಬಿರಾರ್ಥಿ – ಪುರುಷರ ವಿಭಾಗ ಶ್ರೀ ರಂಗಪ್ಪ

ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದವರು :

ಉತ್ತಮ ಮಿಲಿ	:	ಶ್ರೀಮತಿ ಶ್ವೇತಾ
ಉತ್ತಮ ಸುವಿಚಾರ	:	ಶ್ರೀ ರಾಜಶೇಖರಯ್ಯ
ಉತ್ತಮ ಇನ್ಸ್ಟಂಟ್ ಮಿಲಿ	:	ಕುಮಾರಿ ಸಂತೋಷಕುಮಾರಿ
ಪ್ರತಿ ದಿನದ ವರದಿ ಸಲ್ಲಿಸಿದ ತಂಡಗಳಲ್ಲಿ ಉತ್ತಮ ತಂಡ	:	ಬೆಳಕು ತಂಡ
ಉತ್ತಮ ಶಿಬಿರಾರ್ಥಿ	:	ಪುರುಷರ ವಿಭಾಗ ಶ್ರೀ ರಂಗಪ್ಪ, ಮಹಿಳಾ ವಿಭಾಗ ಶ್ರೀಮತಿ ಸುಮಾ

ಉತ್ತಮ ಶಿಬಿರಾರ್ಥಿ – ಮಹಿಳಾ ವಿಭಾಗ ಶ್ರೀಮತಿ ಸುಮಾ

ಸಮಾರೋಪ ಸಮಾರಂಭದಲ್ಲಿ ಗಣ್ಯರೊಂದಿಗೆ ಶಿಬಿರಾರ್ಥಿಗಳು

ಮೈಸೂರು ವಿಭಾಗದ ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಕಾರ್ಯಕ್ರಮ

2014-15 ಮತ್ತು 2015-16ನೇ ಸಾಲಿನಲ್ಲಿ ಮೈಸೂರು ವಿಭಾಗದಲ್ಲಿ ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳಿಗೆ "ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ"ಯನ್ನು ದಿನಾಂಕ : 14-06-2016 ರಂದು ಮೈಸೂರು ಹಾಗೂ 17-06-2016ರಂದು ಉಡುಪಿಯಲ್ಲಿ ಆಯೋಜಿಸಲಾಗಿತ್ತು.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳು : 2014-15 ಮತ್ತು 2015-16ನೇ ಸಾಲಿನಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಹೊಸದಾಗಿ ನೋಂದಣಿಯಾಗಿರುವ "ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ"ಯನ್ನು ದಿನಾಂಕ 14-06-2016ರಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಶ್ರೀ ನರಸಿಂಹ ಪ್ರಸಾದ್, ಹಿರಿಯ ಲೆಕ್ಕಪರಿಶೋಧಕರು, ಸಹಕಾರಿಗಳ ಲೆಕ್ಕಪರಿಶೋಧನಾ ಇಲಾಖೆ, ಮೈಸೂರು ಇವರು ಲೆಕ್ಕಪರಿಶೋಧನೆ ಹಾಗೂ ಲೆಕ್ಕಪರಿಶೋಧಕರ ಕುರಿತು ಮಹತ್ವದ ಮಾಹಿತಿಯನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಹೆಚ್.ವಿ.ರಾಜೀವ್, ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಯುವಕರು ಮುಂದೆ ಬಂದು ಸಹಕಾರಿಗಳನ್ನು ಪ್ರಾರಂಭ ಮಾಡುವಂತೆ ಉತ್ತೇಜನ ನೀಡುವ ಕಾರ್ಯಕ್ರಮಗಳತ್ತ ಹೆಜ್ಜೆ ಹಾಕಬೇಕಾಗಿದೆ. ಉತ್ತರ ಕರ್ನಾಟಕದಲ್ಲಿ 6 ರಿಂದ 8 ಸಾವಿರ ಜನಸಂಖ್ಯೆ ಇರುವ ಊರುಗಳಲ್ಲೂ ಸಹ 15 ರಿಂದ 20 ಸಹಕಾರಿಗಳಿವೆ, ಇಂತಹ ಸ್ಥಳಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ತಮ್ಮ ಶಾಖೆಗಳನ್ನು ತೆರೆಯಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. 'ಜನರ ಲಾಭ ಜನರಿಗೇ, ಸಹಕಾರಿಯ ಲಾಭ ಸಹಕಾರಿಗೇ ಸೇರಬೇಕು' ಇದು ಸಹಕಾರ ಕ್ಷೇತ್ರದಲ್ಲಿ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎಸ್. ಪರಶಿವಮೂರ್ತಿ, ನಿವೃತ್ತ ಅಪರ ನಿಬಂಧಕರು, ಮೈಸೂರು, ಡಾ. ಎಲ್. ಸ್ವಾಮಿಗೌಡ, ಪ್ರಾಂಶುಪಾಲರು, ಕರ್ನಾಟಕ ಸಹಕಾರಿ ನಿರ್ವಹಣಾ ಸಂಸ್ಥೆ, ಮೈಸೂರು, ಶ್ರೀ ಮಹಾಬಲಗಿರಿ, ನಿವೃತ್ತ ಸಿ.ಜಿ.ಎಂ., ಡಿಸಿಸಿ ಬ್ಯಾಂಕ್, ಶಿವಮೊಗ್ಗ, ಶ್ರೀ ಶಿವಕುಮಾರ, ಮುಖ್ಯಕಾರ್ಯನಿರ್ವಹಣಾಧಿಕಾರಿ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್, ಮೈಸೂರು ಭಾಗವಹಿಸಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 21 ಸೌಹಾರ್ದ ಸಹಕಾರಿಗಳಿಂದ 33 ಪ್ರತಿನಿಧಿಗಳು ಭಾಗವಹಿಸಿದ್ದರು.

ಉಡುಪಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳು : 2014-15 ಮತ್ತು 2015-16ನೇ ಸಾಲಿನಲ್ಲಿ ಉಡುಪಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೊಸದಾಗಿ ನೋಂದಣಿಯಾಗಿರುವ "ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ"ಯನ್ನು ದಿನಾಂಕ 17-06-2016 ರಂದು ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಸಭಾಭವನ, ಕಿನ್ನಿಮೂಲ್ಕಿ, ಉಡುಪಿ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಹಕಾರಿಗಳ ಉಪನಿಬಂಧಕರಾದ ಶ್ರೀ ಪ್ರವೀಣ ನಾಯಕ್‌ರವರು ಸೌಹಾರ್ದ ಸಹಕಾರಿಗಳ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಸಹಕಾರಿಗಳ ಚಿಂತನೆಗಳು ಅಭಿವೃದ್ಧಿಗೆ ಪೂರಕವಾಗಿರಲಿ

ಎಂದರು.ಅನಂತರ ಸಹಕಾರಿಗಳ ಚುನಾವಣೆ, ಲೆಕ್ಕಪರಿಶೋಧನೆ ಹಾಗೂ ಸಾಲಗಳ ವ್ಯವಸ್ಥೆ ಕುರಿತು ಎಲ್ಲಾ ಸಹಕಾರಿಗಳು ಅಧಿಕಾರಿ ವರ್ಗದೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಕ್ಯಾಂಪ್ಕೋ ಅಧ್ಯಕ್ಷರೂ ಆದ ಶ್ರೀ ಎಸ್.ಆರ್.ಸತೀಶಚಂದ್ರರವರು 1942ರಲ್ಲಿ ಭಾರತ ದೇಶವನ್ನು ಚರ್ಚಿಲ್ ಪುಂಡರ ರಾಷ್ಟ್ರ, ಬಿಕ್ಷುಕರ ದೇಶ, ಎಂದು ಕರೆದಿದ್ದ. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದು, ಭಾರತವು ಇಂದು ಶ್ರೀಮಂತ ದೇಶಗಳಲ್ಲೊಂದು ಎಂದರು. ಇದಕ್ಕೆಲ್ಲಾ ಬದಲಾವಣೆ, ಸಂಶೋಧನೆ, ತಾಂತ್ರಿಕತೆ, ವೇಗ ಹಾಗೂ ಕೌಶಲ್ಯ ಕಾರಣ ಎಂದು ಹೇಳಿದರು.

ಅದಕ್ಕಿಂತ ಮಿಗಿಲಾಗಿ ಸಹಕಾರ ಕ್ಷೇತ್ರದ ಕೊಡುಗೆ ಹಾಗೂ ಹಸಿರು ಕ್ರಾಂತಿ, ನೀಲಿ ಕ್ರಾಂತಿ, ಹೈನುಗಾರಿಕಾ ಕ್ರಾಂತಿ ಕಾರಣ ಎಂದು ಸಹಕಾರ ಕ್ಷೇತ್ರದ ಮಹತ್ವವನ್ನು ಶ್ಲಾಘಿಸಿದರು. ಮುಂದಿನ ದಿನಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಬಡ್ಡಿಯೇತರ ಆದಾಯದ ಮೂಲಗಳು, ಠೇವಣಾತಿ ಯೋಜನೆ ಬಗ್ಗೆ ತರಬೇತಿ ನೀಡಬೇಕು. ಭವಿಷ್ಯದಲ್ಲಿ ಸೌಹಾರ್ದ ಸಹಕಾರಿಗಳಿಗೆ ಸಾಮಾನ್ಯ ತಂತ್ರಾಂಶ, ಸೌಹಾರ್ದ ಅಪೆಕ್ಸ್ ಬ್ಯಾಂಕ್ ಮುಂತಾದವುಗಳ ಅಳವಡಿಕೆಗೆ ಅಡಿಪಾಯವಾಗುವ ಇಂಗಿತವನ್ನು ವ್ಯಕ್ತಪಡಿಸುತ್ತಾ, ನಮ್ಮ ನಿಮ್ಮೆಲ್ಲರ ಜೀವನದಿಂದ ನಾಲ್ಕು ಜನರ ಕಣ್ಣೀರು ಒರೆಸುವ ಕೆಲಸವಾಗಲಿ ಎಂದು ಹೇಳಿದರು.

ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್‌ರವರು ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ನಮ್ಮ ಧ್ಯೇಯವಾಗಿದ್ದು, ಸೌಹಾರ್ದ ಸಹಕಾರಿಗಳನ್ನು ಜ್ಞಾನವಂತರನ್ನಾಗಿಸಲು ಈ ರೀತಿಯ ತರಬೇತಿ ಕಾರ್ಯಕ್ರಮಗಳು ಬಹು ಉಪಯುಕ್ತ ಹಾಗೂ ಎಲ್ಲಾ ಸಹಕಾರಿಗಳು ಗುಣಮಟ್ಟದ ಕಾರ್ಯವನ್ನು ನಿರ್ವಹಿಸಬೇಕು ಎಂದರು.

ಶ್ರೀ ಮಹಾಬಲಗಿರಿ, ನಿವೃತ್ತ ಸಿ.ಜಿ.ಎಂ., ಡಿಸಿಸಿ ಬ್ಯಾಂಕ್, ಶಿವಮೊಗ್ಗ, ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಸೊಸೈಟಿಯ ಜನರಲ್ ಮ್ಯಾನೇಜರ್ ಶ್ರೀ ರಾಜೇಶ್ ಹೆಗಡೆ, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 36 ಸೌಹಾರ್ದ ಸಹಕಾರಿಗಳಿಂದ 62 ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು.

5ನೇ ಅಧಿವೇಶನದ ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಕರೆಸ್ಪಾಂಡೆನ್ಸ್ ಕೋರ್ಸ್‌ಗಾಗಿ ಅರ್ಜಿಗಳ ಆಹ್ವಾನ

ದಿನಾಂಕ : 27.07.2016 ರಿಂದ 24.01.2017ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ 5ನೇ ಅಧಿವೇಶನದ ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಕರೆಸ್ಪಾಂಡೆನ್ಸ್ ಕೋರ್ಸ್ ದೂರ ಶಿಕ್ಷಣದ ಮೂಲಕ ಅಧ್ಯಯನ ಮಾಡಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ನೋಂದಾಯಿಸಲು ಯಾವುದೇ ವಿಶ್ವವಿದ್ಯಾಲಯದ ಪದವಿಯನ್ನು ಪಡೆದಿರಬೇಕು. ಕಾರ್ಯಕ್ರಮದ ಶುಲ್ಕ ರೂ.8,000/- + 15% ಸೇವಾ ತೆರಿಗೆ ಒಟ್ಟು ರೂ. 9,200/- ಪಾವತಿಸಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮದ ಸಮನ್ವಯಾಧಿಕಾರಿ ಡಾ. ಬಿ.ಕಿಶೋರ್, 9483267268 ಇವರನ್ನು ಸಂಪರ್ಕಿಸ ಬಹುದಾಗಿದೆ.

62ನೇ ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್‌ಮ್ಯಾನೇಜ್‌ಮೆಂಟ್ ತರಬೇತಿಗಾಗಿ ಅರ್ಜಿಗಳ ಆಹ್ವಾನ

ದಿನಾಂಕ : 22.08.2016 ರಿಂದ 19.02.2017ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ 26 ವಾರಗಳ ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ದಿನಾಂಕ : 13.08.2016ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಲು ಕೋರಿದೆ. ತರಬೇತಿಯ ಶುಲ್ಕ ರೂ. 8,000/- + 15% ಸೇವಾ ತೆರಿಗೆ.

ಅರ್ಜಿಗಳನ್ನು ಸಲ್ಲಿಸಲು ಇಚ್ಛಿಸುವವರು ಕಾರ್ಯಕ್ರಮದ ಸಮನ್ವಯಾಧಿಕಾರಿ ಡಾ.ಎಂ.ಜಯಪ್ರಕಾಶ, ಪ್ರಾಧ್ಯಾಪಕರು, ದೂರವಾಣಿ ಸಂಖ್ಯೆ ಕಛೇರಿ : 080-26692036, ಮೊಬೈಲ್ ಸಂಖ್ಯೆ : 9663720974 ಇವರನ್ನು ಸಂಪರ್ಕಿಸಬಹುದಾಗಿದೆ.

ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ನೂತನ ಸೌಹಾರ್ದ ಸಹಕಾರಿಗಳಿಗೆ ಪ್ರವೇಶ ತರಬೇತಿ ಕಾರ್ಯಕ್ರಮ

2014-15 ಮತ್ತು 2015-16ನೇ ಸಾಲಿನಲ್ಲಿ ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಪ್ರವೇಶ ತರಬೇತಿ"ಯನ್ನು ದಿನಾಂಕ 23-06-2016 ರಂದು ಬೀದರ್‌ನಲ್ಲಿ ಹಾಗೂ ಕಲಬುರಗಿಯಲ್ಲಿ 24-06-2016 ರಂದು ಆಯೋಜಿಸಲಾಗಿತ್ತು.

ಬೀದರ್ ಜಿಲ್ಲೆ :

ದಿನಾಂಕ 23-06-2016ರಂದು ಬೀದರ್ ಜಿಲ್ಲೆಯಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ಹೊಸದಾಗಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಪ್ರವೇಶ ತರಬೇತಿ"ಯನ್ನು ಬೀದರ್‌ನಲ್ಲಿ ಆಯೋಜಿಸಲಾಗಿತ್ತು.

ಸದರಿ ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ಶಿವಾನಂದ ಮಂಠಾಳಾಕರ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ನಾಗಶೇಖರ್ ನಾಗಮೂರ್ತಿ ಇವರು ಉಪಸ್ಥಿತರಿದ್ದರು.

ಈ ತರಬೇತಿಯಲ್ಲಿ ಬೀದರ್ ಜಿಲ್ಲೆಯ 35 ಸೌಹಾರ್ದ ಸಹಕಾರಿಗಳಿಂದ 66 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.

ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳು :

ದಿನಾಂಕ 24-06-2016ರಂದು ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ಹೊಸದಾಗಿ ನೋಂದಣಿ ಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಪ್ರವೇಶ ತರಬೇತಿ" ಯನ್ನು ಕಲಬುರಗಿ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ಶಾಂತಿನಾಥ ಎಸ್. ಪಂಡಿತ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ತರಬೇತಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ವೈ.ಟಿ.ಪಾಟೀಲ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು.

ಈ ತರಬೇತಿಯಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ 31 ಸೌಹಾರ್ದ ಸಹಕಾರಿಗಳಿಂದ 43 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.

ಆಡಳಿತ ಪರಿಣಿತ ಅಭಿವೃದ್ಧಿ ಕಾರ್ಯಾಗಾರ

ಕಲಬುರಗಿ ವಿಭಾಗ :

ಸಿಂಧನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರುಗಳಿಗೆ ದಿನಾಂಕ 12.06.2016ರಂದು "ಆಡಳಿತ ಪರಿಣಿತ ಅಭಿವೃದ್ಧಿ ಕಾರ್ಯಾಗಾರ"ವನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಶ್ರೀಮತಿ ಮಂಜುಳಾ ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಉಪಸ್ಥಿತರಿದ್ದರು.

ತಾಲ್ಲೂಕಿನ 35 ಸೌಹಾರ್ದ ಸಹಕಾರಿಗಳಿಂದ 92 ಸಹಕಾರಿ ಪ್ರತಿನಿಧಿಗಳು ಹಾಗೂ 3 ಸಹಕಾರಿ ಸಂಘಗಳಿಂದ 10 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಾಗಾರದ ಪ್ರಯೋಜನ ಪಡೆದರು.

ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಗೆ ನ್ಯಾಯಾಲಯದ ಕಾರ್ಯಾಚರಣೆ ಕುರಿತು ತರಬೇತಿ

ಕ್ರಿಯಾಶೀಲರಾಗಿ ದಕ್ಷತೆಯಿಂದ ಸೌಹಾರ್ದ ಸಹಕಾರಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಿ – ಶ್ರೀ ಗುರುನಾಥ ಜಾಂತಿಕರ

ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯ ಕಾರ್ಯಾಚರಣೆ ಕುರಿತು ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಗಾಗಿ ಒಂದು ದಿನದ ತರಬೇತಿಯನ್ನು ಏರ್ಪಡಿಸಲಾಗಿತ್ತು.

ತರಬೇತಿಯಲ್ಲಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ ಅನೇಕ ದಿನಗಳ ಬೇಡಿಕೆಯನ್ನು ರಾಜ್ಯ ಸರಕಾರ ಪೂರೈಸಿದೆ. ಪ್ರತ್ಯೇಕ ನ್ಯಾಯಾಲಯ ಒದಗಿಸಿದೆ. ಸದ್ಯದಲ್ಲಿಯೇ ಅಧಿಕಾರಿಗಳನ್ನು ನೇಮಕ ಮಾಡಲಿದ್ದಾರೆ.

ಈ ಮಧ್ಯೆ ನಾವು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಈ ನ್ಯಾಯಾಲಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಅಗತ್ಯವಾಗುವ ಎಲ್ಲಾ ಮಾಹಿತಿಯನ್ನು ಹೊಂದುವುದು ಅಗತ್ಯ. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಕ್ರಿಯಾಶೀಲರಾಗಿ, ಸೌಹಾರ್ದ ಸಹಕಾರಿಗಳ ಸ್ನೇಹಿತನಾಗಿ, ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ತಪ್ಪುಗಳಾಗುವುದುಸಹಜ. ತಪ್ಪುಗಳನ್ನು ತಿದ್ದಿಕೊಂಡು ಪುನರಾವರ್ತನೆಯಾಗದಂತೆ ನ್ಯಾಯಯುತವಾಗಿ ಹಾಗೂ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುವ ದಕ್ಷತೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ, ಮೊದಲಿನಿಂದಲೂ ಸಂಯುಕ್ತ ಸಹಕಾರಿಯ ನಡೆ ಗುಣಾತ್ಮಕ ಬೆಳವಣಿಗೆಯ ಕಡೆಗೆ

ಇದೆ ಎಂಬುದನ್ನು ಗಮನಿಸಿ, ಅದರಂತೆ ಯಾವುದೇ ಸಂದರ್ಭದಲ್ಲಿಯೂ ನಮ್ಮ ಗುಣಾತ್ಮಕ ಕಾರ್ಯಚಟುವಟಿಕೆಗಳಲ್ಲಿ ಲೋಪಗಳು ಉಂಟಾಗದಂತೆ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ತಿಳಿದಿರಬೇಕಾದ ಸೌಹಾರ್ದ ಸಹಕಾರಿ ಕಾನೂನಿನ ಮುಖ್ಯಾಂಶಗಳು, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಕ್ಷೇತ್ರ ವಿಸ್ತರಣಾ ಕಾರ್ಯಗಳ ಬಗ್ಗೆ, ಸಹಕಾರಿಗಳ ನಿಬಂಧಕರ ಕಛೇರಿಯ ಸಹಾಯಕ ನಿಬಂಧಕರಾದ ಶ್ರೀ ಎಂ.ಪಿ.ಮಂಜುನಾಥ ಇವರು ಸಹಕಾರಿಗಳ ಸಮಾಪನಾ ವಿಧಿಗಳು ಹಾಗೂ ವಿಚಾರಣಾ ವಿಧಾನಗಳ ಬಗ್ಗೆ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರಾದ ಶ್ರೀ ಎಂ.ಬಸಪ್ಪರವರು ದಾವಾ ದಾಖಲಾತಿ ವಿಧಾನಗಳು ಬಗ್ಗೆ ಉಪನ್ಯಾಸ ನೀಡಿದರು.

SMS ಸೇವೆ ಪ್ರಾರಂಭಿಸಿದ ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್

ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತದಿಂದ SMS ಸೇವೆಯನ್ನು ಪ್ರಾರಂಭಿಸಿದ್ದು, ಬ್ಯಾಂಕ್‌ನ ಸದಸ್ಯರು, ಗ್ರಾಹಕರು, ಠೇವಣಿದಾರರೆಲ್ಲರೂ ಸಹ ಇದರ ಸದುಪಯೋಗವನ್ನು ಪಡೆಯಬೇಕೆಂದು ಬ್ಯಾಂಕಿನ ಪರವಾಗಿ ಮುಖ್ಯಕಾರ್ಯನಿರ್ವಾಹಕರು ಮನವಿ ಮಾಡಿದ್ದಾರೆ.



ಶ್ರೀ ಎಲ್.ಸ್ವಾಮಿಗೌಡವರವರಿಗೆ ಮೈಸೂರು ವಿಶ್ವವಿದ್ಯಾಲಯದ ಪಿ.ಹೆಚ್‌ಡಿ. ಪದವಿ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮೈಸೂರು ಕರ್ನಾಟಕ ಇನ್ಸ್‌ಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಎಲ್. ಸ್ವಾಮಿಗೌಡರವರಿಗೆ ಮೈಸೂರು ವಿಶ್ವವಿದ್ಯಾಲಯದವರು "Performance Evaluation of PACS in Mysore District - A Co-operative Governance Approach" ಎಂಬ ವಿಷಯದ ಬಗ್ಗೆ ಡಾಕ್ಟರೇಟ್ ಪದವಿ ನೀಡಿದ್ದಾರೆ.

ಶ್ರೀ ಹಳದರಂಗ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಳ್ಳೂರ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಪ್ಪ ಬ.ಕೌಜಲಗಿ ಇವರಿಗೆ ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ (ರಿ), ಬೆಂಗಳೂರು ಇವರು ದಿನಾಂಕ 22–05–2016ರಂದು ಕರ್ನಾಟಕ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ, ಗೌರವಿಸಿದ್ದಾರೆ.

ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಬೋಮಗೊಂಡೇಶ್ವರ ಸೌಹಾರ್ದ ಸಹಕಾರಿ ನಿ., ಬೀದರ್.

ಶ್ರೀ ರಾಜಶೇಖರ ನಾಗಮೂರ್ತಿ
ಅಧ್ಯಕ್ಷರು

ಶ್ರೀ ಸುಭಾಷ ವಿಶ್ವನಾಥ ಬಿರಾದರ
ಉಪಾಧ್ಯಕ್ಷರು

ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯಿಂದ ದಿನಾಂಕ 21–06–2016ರಂದು ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಅಭ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಖಾನಾಪುರದಲ್ಲಿ ಸೈಂಟ್ ಮಿಲಾಗ್ರಿಸ್ ಸಹಕಾರಿಯ 40ನೇ ಶಾಖೆಯ ಉದ್ಘಾಟನೆ

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ 40ನೇ ಶಾಖೆಯನ್ನು ಖಾನಾಪುರದಲ್ಲಿ ದಿ : 02.06.2016ರಂದು ಖಾನಾಪುರದ ಆಶೀರ್ವಾದ ಕಾಂಪ್ಲೆಕ್ಸ್‌ನಲ್ಲಿ ವಂದನೀಯ ಫಾ। ಆಗಸ್ಟಿನ್ ಫರ್ನಾಂಡಿಸ್ (ಎಸ್.ಜೆ.)ರವರ ಆಶೀರ್ವಚನ ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನಿವೇದಿತ್ ಆಳ್ವಾರವರ ಅಮೃತ ಹಸ್ತದಿಂದ ಉದ್ಘಾಟನೆ.

ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

ನಿಮ್ಮ ಪ್ರಶ್ನೆ

ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ಶ್ರೀ ಜಗದೀಶ ಜೋಶಿ, ಹುಬ್ಬಳ್ಳಿ.

1. ಸಹಕಾರಿಯಲ್ಲಿ ಸೌಹಾರ್ದ ಕಾಯ್ದೆಯಂತೆ ಕೇವಲ ಸದಸ್ಯರಿಗೆ ಮಾತ್ರ ಸಾಲ ನೀಡುಬೇಕಿರುತ್ತದೆ. ಆದರೆ, ಸಿಬ್ಬಂದಿ ಸದಸ್ಯತ್ವ ಪಡೆಯಬಹುದಾ? ಸಿಬ್ಬಂದಿ ಸೇವೆಯಿಂದ ಬಿಡುಗಡೆ ಹೊಂದಿದಾಗ ಅಥವಾ ಇಲ್ಲವಾದಲ್ಲಿ ಸಿಬ್ಬಂದಿಗಳಿಗೆ ಯಾವ ತತ್ವದ ಆಧಾರಿತ ಸಾಲ ನೀಡಬಹುದು? (ಕಾರಣ ಸೇವಾ ನಿಯಮದಲ್ಲಿ ಸಾಲದ ಪ್ರಾವಧಾನ ಕಲ್ಪಿಸಲಾಗಿದೆ.)

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20ರಲ್ಲಿ ಸಹಕಾರಿಯ ಸದಸ್ಯರು ಯಾರಾಗಬಹುದು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿರುತ್ತದೆ. ಸದರಿ ಕಲಂನಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ಯಾವುದೇ ನಿಷೇಧ/ ನಿರ್ಬಂಧ ಇರುವುದಿಲ್ಲ. ಆದರೆ, ಒಂದುವೇಳೆ ಸಹಕಾರಿಯ ಉಪವಿಧಿ ಅಥವಾ ಸಹಕಾರಿಯು ರೂಪಿಸಿಕೊಂಡಿರುವ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ನಿಷೇಧ / ನಿರ್ಬಂಧವಿದ್ದಲ್ಲಿ, ಅಂತಹ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗುವಂತಿಲ್ಲ. ಸಹಕಾರಿಯ ಸೇವಾ ನಿಯಮಗಳಲ್ಲಿ ಸಹಕಾರಿಯ ಸಿಬ್ಬಂದಿಯು ಸಾಲವನ್ನು ಪಡೆದುಕೊಳ್ಳಲು ಅವಕಾಶವಿದ್ದಲ್ಲಿ, ಸಹಕಾರಿಯ ಸದಸ್ಯನಲ್ಲದಿದ್ದರೂ ಸಹ ಸಿಬ್ಬಂದಿ ಸಾಲವನ್ನು ಪಡೆದುಕೊಳ್ಳಲು ಅರ್ಹತೆ ಹೊಂದಿರುತ್ತಾನೆ. ಆದರೆ, ಸಿಬ್ಬಂದಿಯು ಸಾಲವನ್ನು ಪಡೆದುಕೊಂಡ ನಂತರ ಸಹಕಾರಿಯ ಉದ್ಯೋಗವನ್ನು ತೊರೆಯುವಾಗ ಅಥವಾ ಉದ್ಯೋಗದಿಂದ ಬಿಡುಗಡೆಗೊಳಿಸುವ ಪೂರ್ವದಲ್ಲಿ ಆತನು ಪಡೆದುಕೊಂಡಿರುವ ಸಾಲದ ಮರುಪಾವತಿಗೆ ಒತ್ತಾಯಪಡಿಸಬಹುದಾಗಿರುತ್ತದೆ. ಆದಾಗ್ಯೂ, ಸಾಲವನ್ನು ಮರುಪಾವತಿಸದಿದ್ದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ಸಮುಚಿತ ಪ್ರಾಧಿಕಾರದಲ್ಲಿ ವಿವಾದವನ್ನು ದಾಖಲಿಸಲು ಅವಕಾಶವಿರುತ್ತದೆ.

2. ಸಹಕಾರಿಗೆ ಹಣದ ಅವಶ್ಯಕತೆ ಇರುವ ಸಮಯದಲ್ಲಿ ಡಿಬೆಂಚರ್ ಬಿಡುಗಡೆ ಮಾಡಬಹುದಾ? ನಿರ್ದೇಶಕ ಮಂಡಲಿಯವರು ಡಿಬೆಂಚರ್‌ನಲ್ಲಿ ಹಣ ತೊಡಗಿಸಬಹುದೇ? ಡಿಬೆಂಚರ್ ಮೇಲಿನ ಬಡ್ಡಿಯನ್ನು ಹೇಗೆ ನಿಗದಿ ಮಾಡಬೇಕು? ಹೆಚ್ಚಿನ ಸಂಖ್ಯೆಯಲ್ಲಿ ಡಿಬೆಂಚರ್ ಅರ್ಜಿಗಳು ಬಂದಾಗ ನಿರ್ದೇಶಕರಿಗೆ ಹೆಚ್ಚಿನ ಡಿಬೆಂಚರ್ ತಿರಸ್ಕರಿಸಲು ಅಧಿಕಾರವಿದೆಯಾ? ಡಿಬೆಂಚರ್ ಬಿಡುಗಡೆ ಮಾಡಬೇಕಾದಲ್ಲಿ ವಿಧಾನ ತಿಳಿಸಿ.

ಉತ್ತರ : ಸಹಕಾರಿಯು ಹೆಚ್ಚಿನ ನಿಧಿಯನ್ನು ಹೊಂದುವ ದೃಷ್ಟಿಯಿಂದ ಸಹಕಾರಿಯ ಸದಸ್ಯರಿಗಾಗಿ ಡೆಬೆಂಚರ್ ಬಿಡುಗಡೆ ಮಾಡಬಹುದು. ಸಹಕಾರಿಯ ನಿರ್ದೇಶಕರೂ ಸಹ ಡಿಬೆಂಚರ್‌ನಲ್ಲಿ ಹಣವನ್ನು ತೊಡಗಿಸಬಹುದು. ಡಿಬೆಂಚರ್ ಮೇಲಿನ ಬಡ್ಡಿ ನಿಗದಿ, ಡಿಬೆಂಚರ್‌ಗಳ ಸಂಖ್ಯೆ ನಿಗದಿ, ಡಿಬೆಂಚರ್ ಅರ್ಜಿಗಳ ತಿರಸ್ಕಾರ ಹಾಗೂ ಡಿಬೆಂಚರ್ ಬಿಡುಗಡೆ ಮಾಡುವ ವಿಧಾನದ ಕುರಿತು ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ಆದರೆ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10(2)(xi)ರನ್ವಯ ನಿಧಿಗಳನ್ನು (ಡಿಬೆಂಚರ್ ಸಹ ನಿಧಿಯಾಗಿರುತ್ತದೆ) ಸಂಗ್ರಹಿಸುವ ವ್ಯಾಪ್ತಿ ಅಂದರೆ ಯಾವ ಮೊತ್ತದ ಅವಧಿಯವರೆಗೆ ಡಿಬೆಂಚರ್ ಸಂಗ್ರಹಿಸಬಹುದು ಎನ್ನುವುದರ ಕುರಿತು ಹಾಗೂ ಅದರ ಷರತ್ತುಗಳ ಕುರಿತು ಸಹಕಾರಿಯ ಉಪವಿಧಿಯಲ್ಲಿ ಸೂಕ್ತ ಪ್ರಾವಧಾನವಿರಬೇಕಾಗುತ್ತದೆ. ಡಿಬೆಂಚರ್ ಸಹಕಾರಿಗೆ ದೀರ್ಘಕಾಲೀನ ಜವಾಬ್ದಾರಿಯಾಗಿರುವ ಕಾರಣ ಡಿಬೆಂಚರ್‌ಗಳ ಬಿಡುಗಡೆಗೆ ಸಂಬಂಧಿಸಿದಂತೆ ಕಂಪನಿ ಅಧಿನಿಯಮ, 1956ರಲ್ಲಿ ತಿಳಿಸಿರುವ ವಿಧಾನವನ್ನು ಯಥೋಚಿತ ವ್ಯತ್ಯಾಸದೊಂದಿಗೆ ಪಾಲಿಸುವುದು ಸೂಕ್ತ. ಅಲ್ಲದೇ, ಸಾಮಾನ್ಯವಾಗಿ ಯಾವುದೇ ಡಿಬೆಂಚರ್ ಬಿಡುಗಡೆಗೊಳಿಸುವುದಕ್ಕೆ ಸರ್ಕಾರದ ಅಥವಾ ಬ್ಯಾಂಕಿನ ಗ್ಯಾರೆಂಟಿಯನ್ನು (ಖಾತರಿ) ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರಿಯು ಸರ್ಕಾರದ ಅಥವಾ ಬ್ಯಾಂಕಿನ ಗ್ಯಾರೆಂಟಿಯನ್ನು (ಖಾತರಿ) ನೀಡಿ, ಡಿಬೆಂಚರ್ ಬಿಡುಗಡೆಗೊಳಿಸುವುದು ಸೂಕ್ತವಾಗಿರುತ್ತದೆ. ಡಿಬೆಂಚರ್ ಬಿಡುಗಡೆಗೊಳಿಸುವುದು ಸೇರಿದಂತೆ

ಒಟ್ಟು ಪ್ರಕ್ರಿಯೆಗೆ ಸಹಕಾರಿಯ ಸಾಮಾನ್ಯ ಸಭೆಯ ಪೂರ್ವಾನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

3. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಧ್ಯಾಯ–2, ಕಲಂ 10 (2) (xxi)ರನ್ವಯ ಒಟ್ಟು ಲಾಭ ವಿಂಗಡಣೆ 63% ಆಗುತ್ತದೆ, ತದನಂತರ ಸಿಬ್ಬಂದಿಗೆ 2 ತಿಂಗಳ ಬೋನಸ್ಸು, ತದನಂತರ ಸಂಪೂರ್ಣ ಉಳಿದ ಹಣ ಸದಸ್ಯರಿಗೆ ಲಾಭಾಂಶ ಹಂಚಬೇಕಾ? ಸದರವು 25% ದಾಟಿದಲ್ಲಿ, ಸಂಯುಕ್ತ ಸಹಕಾರಿಯ ಪರವಾನಗಿ ಪಡೆಯಬೇಕಾ? (1959 ಕಾಯ್ದೆ ಅಡಿ 25% ಮೇಲ್ಪಟ್ಟು ಇದ್ದಲ್ಲಿ ನಿಬಂಧಕರ ಪರವಾನಗಿಯ ಅವಶ್ಯಕತೆ ಇರುತ್ತದೆ.)

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಧ್ಯಾಯ–2, ಕಲಂ 10 (2) (xxi)ರನ್ವಯ ಸಹಕಾರಿಯು ಗಳಿಸುವ ಲಾಭದ ಶೇ.52 ಲಾಭ ವಿಂಗಡಣೆ ಮಾಡಬೇಕಿರುತ್ತದೆ. (ಮೀಸಲು ನಿಧಿ–ಶೇ.25, ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ–ಶೇ.2, ಅನಿರೀಕ್ಷಿತ ನಷ್ಟ ಅಥವಾ ಸಾದಿಲ್ವಾರು ಶೇ.20 ಮತ್ತು ಸಾಮಾನ್ಯ ಕ್ಷೇಮ ನಿಧಿಗೆ–ಶೇ.5 ನೇರ ಪದ್ಧತಿಯಲ್ಲಿ ವಿಂಗಡಣೆ ಮಾಡಬೇಕಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2013ರಲ್ಲಿ ಮಾಡಲಾದ ತಿದ್ದುಪಡಿಯಲ್ಲಿ ಕಲಂ–32ಎ ರಡಿಯ ಕೊರತೆ ನಿಭಾವಣೆ ನಿಧಿಯನ್ನು ರದ್ದುಗೊಳಿಸಲಾಗಿದೆ). ಈ ಮೇಲಿನ ಲಾಭ ವಿಂಗಡಣೆಯ ನಂತರ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ನಿಧಿಗಳಿಗೆ, ನಂತರದಲ್ಲಿ ಸಹಕಾರಿಯ ಸಿಬ್ಬಂದಿಗಳಿಗೆ ಎರಡು ತಿಂಗಳಿಗೆ ಮೀರದ ಬೋನಸ್ಸು ನೀಡಲು ಹಾಗೂ ನಂತರದಲ್ಲಿ ಉಳಿದ ಲಾಭವನ್ನು ಸದಸ್ಯರಿಗೆ ಲಾಭಾಂಶ ಹಂಚಲು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (xviii)ರನ್ವಯ ಸಹಕಾರಿಯ ಉಪವಿಧಿಯಲ್ಲಿ ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಸಂದಾಯ ಮಾಡಬಹುದಾದ ಗರಿಷ್ಠ ಲಾಭಂಶವೆಷ್ಟು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ.

ಆದರೆ, ಸದರಿ ಲಾಭಾಂಶದ ಪ್ರಮಾಣವು ಸಹಕಾರ ತತ್ವಗಳಿಗೆ ಅನುಗುಣವಾಗಿ ಇರತಕ್ಕದ್ದು. ಸಹಕಾರಿ ತತ್ವಗಳಲ್ಲಿ ಮೂರನೇ ತತ್ವದಲ್ಲಿ ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ ಎಂದಿರುತ್ತದೆ. ಆದ್ದರಿಂದ, ಈ ತತ್ವ ಉಲ್ಲಂಘನೆಯಾಗದಂತೆ ಕ್ರಮವಹಿಸುವುದು ಸೂಕ್ತವಾಗಿರುತ್ತದೆ. ಲಾಭಾಂಶವನ್ನು ಹಂಚುವಾಗ ಶೇರುಗಳ ಮೇಲೆ ಹಂಚಿಕೆ ಮಾಡಬಹುದಾದ ಲಾಭಾಂಶವು ಸಾಮಾನ್ಯವಾಗಿ ಸದರಿ ಕಾಲಘಟ್ಟದಲ್ಲಿ ನಿಶ್ಚಿತ ಠೇವಣಿಗಳಿಗೆ ಬ್ಯಾಂಕುಗಳು/ ಸಹಕಾರಿ ಸಂಸ್ಥೆಗಳು ಪಾವತಿಸುವ ಬಡ್ಡಿಯ 1 ವರೆ ಪಟ್ಟಿಗಿಂತ ಹೆಚ್ಚು, ಲಾಭಾಂಶ ವಿತರಿಸುವುದು ಸೂಕ್ತವಲ್ಲ.

ಶೇ.25 ಮತ್ತು ಅದಕ್ಕೂ ಹೆಚ್ಚು ಲಾಭಾಂಶ ವಿತರಿಸಲು ಸಂಯುಕ್ತ ಸಹಕಾರಿಯ ಅನುಮತಿ ಅಗತ್ಯವಿಲ್ಲ. ಆದರೆ, ಒಂದುವೇಳೆ ಸಹಕಾರಿಯ ಉಪವಿಧಿಯಲ್ಲಿ ಸಂಯುಕ್ತ ಸಹಕಾರಿಯ ಅನುಮತಿ ಅಗತ್ಯವೆಂದಿದ್ದರೆ ಅದರಂತೆ ಸಂಯುಕ್ತ ಸಹಕಾರಿಯ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಅವಧಿ ವಿಸ್ತರಣೆ : 2016–17ನೇ ಸಾಲಿಗೆ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ಸದಸ್ಯರ ನೋಂದಾವಣೆ ಅವಧಿಯನ್ನು ದಿನಾಂಕ 31–07–2016ರವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2016–17ನೇ ಸಾಲಿಗೆ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯನ್ನು ಮುಂದುವರೆಸಲು ಹಾಗೂ ಹೊಸ ಸದಸ್ಯರುಗಳನ್ನು ನೋಂದಾಯಿಸಲು ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಸಿಓ/163/ಸಿಎಲ್‌ಎಸ್/2015, ಬೆಂಗಳೂರು ದಿನಾಂಕ:15–04–2016.

****

ಪ್ರಸ್ತಾವನೆ:

2016–17ನೇ ಸಾಲಿನ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಸದಸ್ಯರ ನೋಂದಾವಣೆಗೆ ಮೇಲೆ ಓದಲಾದ ಸರ್ಕಾರದ ಆದೇಶದಂತೆ ಜಾರಿಗೊಳಿಸಲಾಗಿದೆ. ಈ ಯೋಜನೆಯು ದಿನಾಂಕ:20–04–2016ರಿಂದ ಪ್ರಾರಂಭವಾಗಿರುತ್ತದೆ. ಅಗತ್ಯ ಪ್ರಿಂಟಿಂಗ್ ಸಾಮಗ್ರಿಗಳು ಇತ್ತೀಚಿಗೆ ಸಂಘ ಸಂಸ್ಥೆಗಳಿಗೆ ತಲುಪಿರುವುದರಿಂದ ಹಾಗೂ ಪ್ರಚಾರ ಕಾರ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಂಡು ಪ್ರಸಕ್ತ ಸಾಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಯಶಸ್ವಿನಿ ಸದಸ್ಯರನ್ನು ನೊಂದಯಿಸಬೇಕಾಗಿರುತ್ತದೆ. ಈ ಯೋಜನೆಯ ನೋಂದಣಿ ಅವಧಿ ದಿನಾಂಕ:31–05–2016ಕ್ಕೆ ಕೊನೆಗೊಳ್ಳುವುದರಿಂದ, ನಗರ ಯಶಸ್ವಿನಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ನೋಂದಾವಣಿ ಮಾಡುವ ದೃಷ್ಟಿಯಿಂದ ನೋಂದಣಿ ದಿನಾಂಕವನ್ನು ವಿಸ್ತರಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಓ/163/ಸಿಎಲ್‌ಎಸ್/2015 ಬೆಂಗಳೂರು ದಿನಾಂಕ:01–06–2016

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ಸದಸ್ಯರ ನೋಂದಾವಣೆ ಅವಧಿಯನ್ನು ದಿನಾಂಕ:31–07–2016ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

- 2 JUN 2016
ಸಂಖ್ಯೆ 1598

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ.
ಸಹಕಾರ ಇಲಾಖೆ.

ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾನೂನುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು

ಬಿ.ವಿ. ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು, ಸಾಗರ.

